

# ಗಾಂಧಿನಗರ ಪೋಸ್ಟ್

■ ರಘು



## ಹೊಸಬರ 'ಅರವಿಂದ'

ಐಶ್ವರ್ಯ ಎರಡನೇ ಪಿಯುಸಿ ವಿದ್ಯಾರ್ಥಿನಿ. ಅರವಿಂದ ರಾಜ್ ಚಿಗುರು ಮೀಸೆಯ ತರುಣ. ಇಬ್ಬರ ಡುಯೆಟ್‌ನ ಚಿತ್ರ 'ಅರವಿಂದ'. ಈ ಹೊಸ ಪ್ರತಿಭೆಗಳ ಮೇಲೆ ನಿರ್ದೇಶಕ ತಿಮ್ಮರಾಜು ಅವರಿಗೆ ಇನ್ನಿಲ್ಲದ ನಂಬಿಕೆ.

ಕಳೆದ ವಾರ ನಡೆದ ಸುದ್ದಿಗೋಷ್ಠಿಯಲ್ಲಿ ನಿರ್ದೇಶಕರು ತಮ್ಮ ಚಿತ್ರದ ಹೊಸ ಪ್ರತಿಭೆಗಳನ್ನು ಹೊಗಳಲಿಕ್ಕೆ ಕಾರಣವಿದೆ. ಎರಡು ವರ್ಷಗಳ ಹಿಂದೆ ಚಿತ್ರಕಥೆ ಬಗಲಲ್ಲಿಟ್ಟುಕೊಂಡಿದ್ದ ತಿಮ್ಮರಾಜು, 'ಕಥೆ ಕೇಳಿ ಸಾರ್' ಎಂದು ಜನಪ್ರಿಯ ನಾಯಕ ನಟರೊಬ್ಬರ ಮನೆಯ ಕದ ತಟ್ಟಿದ್ದರು. ಅದಕ್ಕೆ ನಾಯಕ ನಟನ ಪ್ರತಿಕ್ರಿಯೆ– 'ನನ್ನ ಸಹಾಯಕನಿಗೆ ಕಥೆ ಹೇಳಿ'. ಈ ಮಾತು ಕೇಳಿದ್ದೇ ತಿಮ್ಮರಾಜು ಅವರಿಗೆ ತಾರೆಗಳ ಸಹವಾಸವೇ ಬೇಡ ಅನ್ನಿಸಿದೆ. ಅಲ್ಲಿಂದ ಹೊರಬಂದವರೇ ಹೊಸಬರ ತಲಾಷು ನಡೆಸಿದ್ದಾರೆ. ಆಗ ಕಣ್ಣಿಗೆ ಬಿದ್ದವರು ಐಶ್ವರ್ಯ ಹಾಗೂ ಅರವಿಂದ. ಅಂದಹಾಗೆ, ಅರವಿಂದನ ಮೊದಲ ಹೆಸರು ರಾಜೇಂದ್ರ. ಸಿನಿಮಾಕ್ಕಾಗಿ 'ಅರವಿಂದ ರಾಜ್' ಎನ್ನುವ ಹೊಸ ನಾಮಕರಣ.

ಅರವಿಂದ ಹಾಗೂ ಐಶ್ವರ್ಯ ಇಬ್ಬರಿಗೂ ಮೊದಲ ಚಿತ್ರ ತರಬೇತಿ ಶಾಲೆಯಂತೆ ಅನ್ನಿಸಿದೆ. ಇಬ್ಬರೂ ಪರೀಕ್ಷೆ ಬರೆದಾಗಿದೆ. ಫಲಿತಾಂಶವಷ್ಟೇ ಬಾಕಿಯಿದೆ. ಅಂದಹಾಗೆ, ಈ ಚಿತ್ರವನ್ನು ತೆಲುಗು ಹಾಗೂ ತಮಿಳಿನಲ್ಲಿ ನಿರ್ಮಿಸುವ ಹುಮ್ಮಸ್ಸು ನಿರ್ಮಾಪಕ ರವಿಕಿರಣ್ ಅವರದ್ದು. ತೆಲುಗಿನಲ್ಲಿ ಅಲ್ಲು ಅರ್ಜುನ್ ಹೀರೊ ಆದರೆ ಚಂದ ಎನ್ನುವ ಯೋಚನೆ ಅವರದ್ದು.

## ನೆನೆದಷ್ಟೂ ನೆನಪು!

ಪರಭಾಷಾ ಚಿತ್ರಗಳ ಹಾವಳಿಯ ಕುರಿತು ಕನ್ನಡ ಚಿತ್ರರಂಗ ಕಂಗಾಲಾಗಿರುವ ಸಂದರ್ಭದಲ್ಲಿ, 'ನೆನೆಯುವೆ ನಿನ್ನ' ಚಿತ್ರದ ಧ್ವನಿಸುರುಳಿ ಬಿಡುಗಡೆ ಕಾರ್ಯಕ್ರಮ. ನಾಯಕ–ನಾಯಕಿಯ ಬರವನ್ನು ನೆನೆಯುತ್ತ ನಿರ್ದೇಶಕ ಎಸ್.ಉಮೇಶ್ ಕುಳಿತಿದ್ದರು. ಚಿತ್ರದ ನಾಯಕ ನವೀನ್ ಕೃಷ್ಣರ ಹಾದಿ ಕಾದದ್ದು ಉಪಯೋಗವಾಗಲಿಲ್ಲ. ಮತ್ತೊಬ್ಬ ನಾಯಕ ಕರುಣಾಕರ್ ಹಾಗೂ ನಾಯಕಿ ರಾಣಿ ರಂಜಿತಾ ತಡವಾಗಿಯಾದರೂ ಕಾರ್ಯಕ್ರಮಕ್ಕೆ ಬಂದರು.

'ಅವಳೇ ನನ್ನ ಹೆಂಡ್ತಿ' ಖ್ಯಾತಿಯ ನಿರ್ದೇಶಕ ಉಮೇಶ್ ಈವರೆಗೆ ಇಪ್ಪತ್ತು ಸಿನಿಮಾಗಳನ್ನು ನಿರ್ದೇಶಿಸಿದವರು. ಈ ಅನುಭವ 'ನೆನೆಯುವೆ ನಿನ್ನ' ಚಿತ್ರವನ್ನು ಬೇಗನೆ ಪೂರ್ಣಗೊಳಿಸಲು ನೆರವಾಗಿಲ್ಲ. ಎರಡು ವರ್ಷಗಳಿಂದ ಶೂಟಿಂಗ್ ನಡೆಸುತ್ತಲೇ ಇರುವ, ಇನ್ನೂ ಒಂದು ಗೀತೆಯ ಚಿತ್ರೀಕರಣ ಬಾಕಿಯಿರುವ ಸಿನಿಮಾ ಇದು. 'ನೂರೆಂಟು ವಿಘ್ನಗಳು' ಎಂದು ನೊಂದುಕೊಂಡರು ಉಮೇಶ್. ಪ್ರೇಮದ ಮೊಗ್ಗು ಅರಳುವ ಪರಿಯನ್ನು ಅವರು ಈ ಚಿತ್ರದಲ್ಲಿ ನಿರೂಪಿಸಿದ್ದಾರಂತೆ.

ಈ ಚಿತ್ರದ ನಿಜವಾದ ನಾಯಕ ನಾನೇ ಎಂದು ಎದೆ ಮುಟ್ಟಿಕೊಂಡು ಹೇಳಿದ ಕರುಣಾಕರ್, ಗ್ರಾಮ್ಯ ಸ್ಪರ್ಶದ ಕಥೆಯುಳ್ಳ ಸಿನಿಮಾ ಗೆಲ್ಲುವ ಬಗ್ಗೆ ಆಶಾಭಾವ ವ್ಯಕ್ತಪಡಿಸಿದರು. ಸಿ.ಆರ್.ಬಾಬ್ಬಿ ಸಂಗೀತ ನೀಡಿರುವ ಈ ಚಿತ್ರದಲ್ಲಿ, ಎ.ಆರ್.ರೆಹಮಾನ್ ಜೊತೆ ಕೆಲಸ ಮಾಡಿರುವ ಅಗ್ಗಳಿಕೆಯ ಹಿನ್ನೆಲೆ ಗಾಯಕ ಅಸ್ಲಾಂ ಬಾಬಾ ಗೀತೆಯೊಂದನ್ನು ಹಾಡಿದ್ದಾರಂತೆ. ★







Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.

Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008,

©All rights reserved. Reproduction in whole or in part without permission is prohibited.
RNI No 7891/65